# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST ಇದು ಸುದ್ದಿ ವಿಳಾಸ ಕನ್ನಡ ದಿನಪತ್ರಿಕೆ

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No. 1 | Issue : 285 | Pages .02 | Date : 04.10.2025 SATURDAY RNI NO.KARKAN/2024/89601 Kannada Daily

ಸಂಪುಟ : 01 – ಸಂಚಿಕೆ : 285 – ಪುಟಗಳು : 02 04.10.2025 ಶನಿವಾರ Ph : 8762954248 ದರ : ₹1


## ರಾಷ್ಟ್ರ ರಾಜಕಾರಣದಲ್ಲಿ ಸಂಸದರ ಹೆಜ್ಜೆ ಗುರುತು

### ಪ್ರಮುಖ ಸಮಿತಿಗಳಲ್ಲಿ ಜವಾಬ್ದಾರಿ । ಕ್ಷೇತ್ರ ಜನರ ಋಣವೆಂದ ಶ್ರೇಯಸ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನವದೆಹಲಿ: ಹಾಸನ ಲೋಕಸಭಾ ಕ್ಷೇತ್ರದ ಯುವ ಸಂಸದ ಶ್ರೇಯಸ್ ಎಂ. ಪಟೇಲ್ ಅವರು ರಾಷ್ಟ್ರ ರಾಜಕಾರಣದಲ್ಲಿ ಪ್ರಮುಖ ಜವಾಬ್ದಾರಿಗಳನ್ನು ಪಡೆಯುವ ಮೂಲಕ ಗಮನ ಸೆಳೆದಿದ್ದಾರೆ. ಸಂಸತ್ತಿನ ಎರಡು ಮಹತ್ವದ ಸಮಿತಿಗಳಲ್ಲಿ ಮತ್ತು ಪಕ್ಷದ ಪ್ರಮುಖ ಕಾರ್ಯದಲ್ಲಿ ಅವರಿಗೆ ಸ್ಥಾನ ದೊರೆತಿದ್ದು, ಅವರ ರಾಜಕೀಯ ಭವಿಷ್ಯಕ್ಕೆ ಬಲ ತುಂಬಿದೆ.




**ಸಲಹಾ ಸಮಿತಿಯಲ್ಲಿ ಸದಸ್ಯತ್ವ:**

ಸಂಸತ್ತಿನಲ್ಲಿ ಇತ್ತೀಚೆಗೆ ಮರುರಚಿಸಲಾದ ಪ್ರಮುಖ ಸಮಿತಿಗಳಲ್ಲಿ ಶ್ರೇಯಸ್ ಪಟೇಲ್ ಅವರಿಗೆ ಮಹತ್ವದ ಸ್ಥಾನ ಲಭಿಸಿದೆ. ಅವರು, 'ದಿವಾಳಿತನ ಹಾಗೂ ದಿವಾಳಿತನ ಸಂಹಿತೆ (ತಿದ್ದುಪಡಿ) ವಿಧೇಯಕ' ಕುರಿತ ಸಲಹಾ ಸಮಿತಿಯ ಸದಸ್ಯರಾಗಿ ನೇಮಕಗೊಂಡಿದ್ದಾರೆ. ಈ ಸಮಿತಿಯು ದೇಶದ ಆರ್ಥಿಕತೆಗೆ ಸಂಬಂಧಿಸಿದ ಪ್ರಮುಖ ಮತ್ತು ವಿವಾದಾತಕ ವಿಧೇಯಕದ ಅಂಶಗಳನ್ನು ಆಳವಾಗಿ ಅಧ್ಯಯನ ಮಾಡಿ, ಸಂಸತ್ತಿಗೆ ವರದಿ ಸಲ್ಲಿಸಲಿದೆ.

**ವಾಣಿಜ್ಯ ಸ್ಥಾಯಿ ಸಮಿತಿ ಜವಾಬ್ದಾರಿ:**

ಸಲಹಾ ಸಮಿತಿಯ ಸದಸ್ಯತ್ವದ ಜೊತೆಗೆ, ಶ್ರೇಯಸ್ ಪಟೇಲ್ ಅವರು ಸಂಸತ್ತಿನ ಮತ್ತೊಂದು ಪ್ರಮುಖ ಸಮಿತಿಯಾದ ವಾಣಿಜ್ಯ ಸ್ಥಾಯಿ ಸಮಿತಿಯಲ್ಲಿಯೂ ಸದಸ್ಯರಾಗಿ ಕಾರ್ಯನಿರ್ವಹಿಸಲಿದ್ದಾರೆ. ದೇಶದ ವ್ಯಾಪಾರ, ವಾಣಿಜ್ಯ ಮತ್ತು ಕೈಗಾರಿಕಾ ನೀತಿಗಳನ್ನು ಪರಿಶೀಲಿಸುವ ಈ ಸಮಿತಿಯಲ್ಲಿ ಅವಕಾಶ ಪಡೆದಿರುವುದು, ಹಾಸನದಂತಹ ಗ್ರಾಮೀಣ ಭಾಗದ ಸಂಸದರೊಬ್ಬರು ರಾಷ್ಟ್ರಮಟ್ಟದ ಉನ್ನತ ಆರ್ಥಿಕ ವಿಷಯಗಳ ಮೇಲೆ ಪ್ರಭಾವ ಬೀರುವ ಅವಕಾಶವನ್ನು ಹೆಚ್ಚಿಸಿದೆ.

**ಒಡಿಶಾಗೆ ವಿಶೇಷ ವೀಕ್ಷಕರಾಗಿ ನೇಮಕ:**

ಪಾರ್ಲಿಮೆಂಟ್ ಸಮಿತಿಗಳ ಜವಾಬ್ದಾರಿಗಳ ನಡುವೆಯೇ, ಕಾಂಗ್ರೆಸ್ ಹೈಕಮಾಂಡ್ ಇತ್ತೀಚೆಗೆ ಶ್ರೇಯಸ್ ಪಟೇಲ್ ಅವರನ್ನು ಒರಿಸ್ಸಾರಾಜ್ಯದ ವಿಶೇಷ ವೀಕ್ಷಕರನ್ನಾಗಿ ನೇಮಿಸಿದೆ. ಈ ಬೆಳವಣಿಗೆಯು, ಪಕ್ಷದ ನಾಯಕತ್ವವು ಅವರ ಸಂಘಟನಾ ಕೌಶಲ ಮತ್ತು ಕ್ರಿಯಾಶೀಲತೆಯ ಮೇಲೆ ವಿಶ್ವಾಸವಿಟ್ಟಿದೆ ಎಂಬುದನ್ನು ಸೂಚಿಸುತ್ತದೆ.

ಒಟ್ಟಾರೆಯಾಗಿ, ನಿರಂತರವಾಗಿ ಕ್ರಿಯಾಶೀಲರಾಗಿರುವ ಹಾಸನದ ಯುವ ಸಂಸದರಿಗೆ ಅಲ್ಪಾವಧಿಯಲ್ಲಿಯೇ ಈ ಮಹತ್ವದ ರಾಷ್ಟ್ರಮಟ್ಟದ ಜವಾಬ್ದಾರಿಗಳು ಒದಗಿ ಬಂದಿರುವುದು, ಅವರು ರಾಷ್ಟ್ರ ರಾಜಕಾರಣದಲ್ಲಿ ಸಕಾರಾತ್ಮಕ ಮತ್ತು ಸುಭದ್ರ ರಾಜಕೀಯ ಭವಿಷ್ಯವನ್ನು ಹೊಂದಿದ್ದಾರೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇದು ಹಾಸನ ಜಿಲ್ಲೆಗೆ ಹೆಮ್ಮೆಯ ಸಂಗತಿಯಾಗಿದೆ.

> ಮಹತ್ವದ ಸ್ಥಾನಮಾನ ನಿಭಾಯಿಸಲು ಅವಕಾಶ ಕಲ್ಪಿಸಿಕೊಟ್ಟ ಹಾಸನ ಲೋಕಸಭಾ ಕ್ಷೇತ್ರದ ಜನತೆಗೆ ಧನ್ಯವಾದಗಳು. ನನ್ನ ಮೇಲೆ ವಿಶ್ವಾಸವಿಟ್ಟು ಕ್ಷೇತ್ರದ ಸಂಸದನಾಗಿ ಆಯ್ಕೆ ಮಾಡಿದ್ದೀರಿ. ನೀವು ಇಟ್ಟಿರುವ ಭರವಸೆ ಹುಸಿಯಾಗದಂತೆ ನಿಮ ಮನೆಯ ಮಗನಾಗಿ, ಜವಾಬ್ದಾರಿಯುತ ನಾಗರಿಕನಾಗಿ ಕೆಲಸ ಮಾಡುತ್ತೇನೆ.
> –ಶ್ರೇಯಸ್ ಪಟೇಲ್, ಸಂಸದ

## ಇ–ಸ್ವತ್ತಿಗೆ ಲಂಚದ ಬೇಡಿಕೆ: ಅಮಾನತಿಗೆ ಶಿಫಾರಸು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ಚಿಕ್ಕಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಾರ್ವಜನಿಕ ಕೆಲಸಕ್ಕೆ ಲಂಚದ ಬೇಡಿಕೆ ಇಡುತ್ತಿದ್ದು ಅವರನ್ನು ಸೇವೆಯಿಂದ ಅಮಾನತು ಮಾಡಬೇಕು ಎಂದು ಶಾಸಕ ಎ. ಮಂಜು ಶಿಫಾರಸು ಮಾಡಿದ್ದಾರೆ.



ಪಿಡಿಒ ಸಿ.ಪಿ. ಮನು ವಿರುದ್ಧ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಅವರಿಗೆ ಪತ್ರ ಬರೆದಿದ್ದಾರೆ. ಇ–ಸ್ವತ್ತು ವಿತರಿಸಲು ಸಾರ್ವಜನಿಕರು ಅರ್ಜಿ ಸಲ್ಲಿಸಿದ್ದರೂ ವಿತರಣೆ ಮಾಡದೆ ಹಾಗೂ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. 2024ರ ಆಗಸ್ಟ್ 23 ರಿಂದ 2025ರ ಮಾರ್ಚ್ 31ರ ವರೆಗೆ 15ನೇ ಹಣಕಾಸು ಯೋಜನೆ 1 ಮತ್ತು ನಿಧಿ 2ಕ್ಕೆ ಸಂಬಂಧಿಸಿ ಸಾಮಾನ್ಯ ಸಭೆ ನಡೆಸದೆ ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಗಮನಕ್ಕೆ ಬಾರದಂತೆ ಅನುದಾನ ದುರುಪಯೋಗ ಮಾಡಿಕೊಂಡಿದ್ದಾರೆ. ಕಚೇರಿಗೆ ಸರಿಯಾಗಿ ಹೋಗದೆ ಕರ್ತವ್ಯ ಲೋಪ ಎಸಗಿದ್ದಾರೆ. ಈ ಬಗ್ಗೆ ಜೂನ್ 30ರಂದು ತಮ ಗಮನಕ್ಕೆ ತಂದರೂ ಯಾವುದೇ ಕ್ರಮ ಜರುಗಿಸಿಲ್ಲ. ನಿರ್ಲಕ್ಷ್ಯ ಮಾಡದೆ ತಕ್ಷಣವೇ ಪಿಡಿಒ ಅವರನ್ನು ಸೇವೆಯಿಂದ ಅಮಾನತು ಮಾಡಬೇಕೆಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಿ.ಪಿ. ಮನು ಲಂಚಕ್ಕೆ ಬೇಡಿಕೆಯಿಟ್ಟಿರುವ ವಿಡಿಯೋ ಮೊಬೈಲ್ ಕ್ಯಾಮರಾದಲ್ಲಿ ಸೆರೆಯಾಗಿದೆ. ಕೆ.ಕೆ. ಮಹೇಶ್ ಎಂಬುವವರಿಗೆ ಎರಡು ಜಾಗದ ಇ–ಸ್ವತ್ತು ಮಾಡಿಕೊಡಲು ಪಿಡಿಒ 10 ಸಾವಿರ ರೂ.ಗೆ ಬೇಡಿಕೆಯಿಟ್ಟಿದ್ದಾನೆ.

ಮೊದಲ ಹಂತದಲ್ಲಿ ಮಹೇಶ್ ಅವರು 4 ಸಾವಿರ ರೂ. ಲಂಚ ನೀಡಿದ್ದರು. ಒಂದು ಇ–ಸ್ವತ್ತು ನೀಡಿದ್ದ ಅಧಿಕಾರಿ ಮತ್ತೊಂದನ್ನು ವಿತರಿಸಲು ಹಣ ಬೇಕೆಂದು ಹಠ ಹಿಡಿದಿದ್ದ. ನಂತರ 5 ಸಾವಿರ ರೂ. ನೀಡಿದ್ದರು.

ಆದರೂ ಹೆಚ್ಚಿನ ಹಣಕ್ಕೆ ಬೇಡಿಕೆ ಇಟ್ಟಿದ್ದ. ಹಣ ನೀಡದಿದ್ದರೆ ಯಾವ ಕೆಲಸವೂ ಆಗುವುದಿಲ್ಲ, ನಾಳೆ ತೆಗೆದುಕೊಂಡು ಬನ್ನಿರಿ ಎಂದು ವಾಪಾಸ್ ಕಳುಹಿಸಿದ್ದ. ಈ ವಿಡಿಯೋ ಮೊಬೈಲ್ ಕ್ಯಾಮರಾದಲ್ಲಿ ಸೆರೆಯಾಗಿದೆ. ಈ ಎಲ್ಲಾ ಸಾಕ್ಷ್ಯಾಧಾರ ಪರಿಗಣಿಸಿ ಶಾಸಕ ಎ. ಮಂಜು ಅವರು ಪಿಡಿಒ ಅಮಾನತಿಗೆ ಆಗ್ರಹಿಸಿದ್ದಾರೆ.

## ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಚೌಡೇಶ್ವರಿ ದೇವಿ ಉತ್ಸವ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ವಿಜಯ ದಶಮಿ ಅಂಗವಾಗಿ ತಾಲ್ಲೂಕಿನ ಹಿರೀಸಾವೆ ಗ್ರಾಮದೇವತೆ ಶ್ರೀ ಚೌಡೇಶ್ವರಿ ದೇವಿಯವರ ದಸರಾ ಮಹೋತ್ಸವವು ಸಹಸ್ರಾರು ಭಕ್ತರ ಸಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಕೆರೆ ಏರಿಯಲ್ಲಿರುವ ದೇವಿಯ ಮೂಲ ವಿಗ್ರಹಕ್ಕೆ ಹಿರೀಸಾವೆ ಗ್ರಾಮಸ್ಥರು ಮತ್ತು ಕುರುಹಿನ ಶೆಟ್ಟಿ ಸೇವಾ ಸಮಿತಿ ವತಿಯಿಂದ ಅಭಿಷೇಕ ಮತ್ತು ವಿಶೇಷ ಪೂಜೆ ಮಾಡಲಾಯಿತು. ರಾತ್ರಿ 8 ಗಂಟೆಗೆ ಉತ್ಸವ ಮೂರ್ತಿಗೆ ವಿವಿಧ ಪುಷ್ಪಗಳು ಮತ್ತು ಆಭರಣಗಳಿಂದ ಶೃಂಗರಿಸಿ, ವಿದ್ಯುತ್ ದೀಪಗಳಿಂದ ಅಲಂಕೃತವಾದ ವಾಹನದಲ್ಲಿ ದೇವಿಯವರನ್ನು ಭಕ್ತರ ಜಯ ಘೋಷಣೆಯೊಂದಿಗೆ ಕೂರಿಸಲಾಯಿತು.

ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಸಾಗಿ. ಶುಕ್ರವಾರ ಬೆಳಗಿನ ಜಾವ 2.30ಕ್ಕೆ ದಸರಾ ಮಹೋತ್ಸವ ಮುಕ್ತಾಯವಾಯಿತು. ಶಾಸಕ ಸಿ.ಎನ್. ಬಾಲಕೃಷ್ಣ, ಎಂಎಲ್‌ಸಿ ಸೂರಜ್ ರೇವಣ್ಣ, ಮಾಜಿ ಎಂಎಲ್‌ಸಿ ಎಂ.ಎ. ಗೋಪಾಲಸ್ವಾಮಿ, ಆಣತಿ ಆನಂದ್ ಸೇರಿದಂತೆ ವಿವಿಧ ಜನಪ್ರತಿನಿಧಿಗಳು ದಸರಾ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ಹಿರೀಸಾವೆಯ ಮಂಜುನಾಥ ತಂಡದ ಮಂಗಳವಾದ್ಯ, ನಿಂಗಪ್ಪನವರ ರಾಜಪುರದ ಮಹಿಳೆಯರ ಕೋಲಾಟ, ಅಜಂಪುರದವರ ವೀರಗಾಸೆ ಕುಣಿತ, ಬೆಳ್ತಂಗಡಿಯ ಸೃಷ್ಟಿ ಆರ್ಟ್ಸ್‌ನವರ ಕೀಲುಕುದುರೆ ಗೊಂಬೆ ಮೇಳ, ಸಾಗರದ ಬಸಪ್ಪ ತಂಡದ ಡೊಳ್ಳು ಕುಣಿತ, ಆಲ್ದೂರಿನ ನಟರಾಜ್ ತಂಡದ ಸೋಮನ ಕುಣಿತ ಸೇರಿದಂತೆ ಹಲವು ಕಲಾತಂಡಗಳು ಮತ್ತು ನಿಶು ಲೈಟಿಂಗ್ಸ್ ನವರ ಬಣ್ಣ, ಬಣ್ಣದ ವಿದ್ಯುತ್ ದೀಪಾಲಂಕಾರ ಹಾಗೂ ಡಿಜಿಟಲ್ ಸೌಂಡ್ಸ್‌ನ ಹಾಡುಗಳಿಗೆ ಯುವಕರು ಕುಣಿದು ಕುಪ್ಪಳಿಸಿ ದಸರಾಕ್ಕೆ ರಂಗು ತುಂಬಿದರು. ಚೌಡೇಶ್ವರಿ ಸಮುದಾಯ ಭವನದಲ್ಲಿ ಅನ್ನದಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಹಿರೀಸಾವೆಯ ಲಕ್ಷ್ಮೀ ದೇವಿ, ಬಸವೇಶ್ವರ, ಸಿದ್ದೇಶ್ವರ, ಉಡಿಸಲಮ , ಸಿದ್ದಲಿಂಗೇಶ್ವರಸ್ವಾಮಿ, ಕಾಳಿಕಾಂಬ, ಮುದ್ರೆಕಲ್ ಆಂಜನೇಯ ಸ್ವಾಮಿ, ಚನ್ನಕೇಶವ ಸ್ವಾಮಿ ದೇವರುಗಳು ಮೆರವಣಿಗೆಯಲ್ಲಿ ಸಾಗಿದವು. ಬೆಳಗಿನ ಜಾವದ ವರೆಗೂ ಉತ್ಸವದಲ್ಲಿ ಸಾವಿರಾರು ಮಂದಿ ಪಾಲ್ಗೊಂಡರು.

ಪಟ್ಟಣದಲ್ಲಿ ಪ್ರತಿಷ್ಠಾಪಿಸಿದ್ದ ಗೌರಿ, ಗಣೇಶ ಮೂರ್ತಿಗಳ ವಿಸರ್ಜನಾ ಮಹೋತ್ಸವವು ಸಹ ನಡೆಯಿತು. ಕಳೆದ ಹತ್ತು ದಿನಗಳಿಂದ ವಿವಿಧ ದೇವರಗಳ ಒಕ್ಕಲಿನವರು ಮತ್ತು ಸಮುದಾಯದವರು ನವರಾತ್ರಿ ಆಚರಣೆ ಮಾಡಿದ್ದರು.

## ಚೌಡೇಶ್ವರಿ ದೇಗುಲದಲ್ಲಿ ನವರಾತ್ರಿ ಉತ್ಸವ ಸಂಪನ್ನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ಅರೇಹಳ್ಳಿ ಹೋಬಳಿ ವಾಟೇಹಳ್ಳಿ–ಹೊಸಮನೆ ಗ್ರಾಮದಲ್ಲಿರುವ ಚೌಡೇಶ್ವರಿ ದೇಗುಲದಲ್ಲಿ ನವರಾತ್ರಿ ಉತ್ಸವ ಸಂಪನ್ನಗೊಂಡಿತು.

ದೇವಸ್ಥಾನ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಮಂಜುನಾಥ್ ಶೆಟ್ಟಿ ಮಾತನಾಡಿ, ಟ್ರಸ್ಟ್ ಹಾಗೂ ಉತ್ಸವ ಸಮಿತಿಯಿಂದ ಆಯೋಜಿಸಿದ್ದ ನವರಾತ್ರಿ ಪೂಜೆ ಅರ್ಥಪೂರ್ಣವಾಗಿ ನೆರವೇರಿದೆ. ದೇವಿಗೆ ಹೂವು ಹಾಗು ಚಿನ್ನಾಭರಣ ಅಲಂಕಾರ, ಪಂಚಾಮೃತ ಅಭಿಷೇಕ ನೆರವೇರಿಸಲಾಗಿದೆ. ಹನ್ನೊಂದನೇ ದಿನ ಗಣಪತಿ ಹೋಮ, ಗಂಗಾ ಹೋಮ, ಗಣ ಹೋಮ, ಕಲಾಭಿವೃದ್ಧಿ ಹೋಮವನ್ನು ಭಕ್ತಿಯಿಂದ ನಡೆಸಲಾಯಿತು. ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದ್ದಾರೆ ಎಂದರು.

ಉತ್ಸವ ಸಮಿತಿ ಅಧ್ಯಕ್ಷ ಆನಂದ ಶೆಟ್ಟಿ, ಟ್ರಸ್ಟ್ ಖಜಾಂಚಿ ಲಕ್ಷ್ಮಣ್ ರಾಜ್ ಅರಸ್, ಉತ್ಸವ ಸಮಿತಿ ಮಾಜಿ ಅಧ್ಯಕ್ಷ ಅಶೋಕ್ ರಾಜ್ ಅರಸ್, ದೇವರಾಜ್ ಅರಸ್, ರಜನೀಶ್ ಅರಸ್, ಧನರಾಜ್ ಅರಸ್, ಸುರೇಶ್ ರಾಜ್ ಅರಸ್, ಮಹೇಶ್ ಶೆಟ್ಟಿ, ಶಾಂತರಾಜ್ ಶೆಟ್ಟಿ ಇತರರಿದ್ದರು.

### ಇಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆ

ಹಾಸನ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲೆಯ ಎಲ್ಲಾ ಹಿರಿಯ ನಾಗರಿಕರ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಅ. 4ರ ಬೆಳಿಗ್ಗೆ 11 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಆಯೋಜಿಸಲಾಗಿದೆ.

ಶಾಸಕ ಹೆಚ್.ಪಿ. ಸ್ವರೂಪ್ ಅಧ್ಯಕ್ಷತೆ ವಹಿಸಲಿದ್ದಾರೆ.ಸಂಸದ ಶ್ರೇಯಸ್ ಪಟೇಲ್, ಮಹಾನಗರ ಪಾಲಿಕೆ ಮೇಯರ್ ಗಿರೀಶ್ ಚನ್ನವಿರಪ್ಪ ಭಾಗವಹಿಸಲಿದ್ದಾರೆ .ಹಿರಿಯ ನಾಗರಿಕರ ಪಾಲನೆ ಪೋಷಣೆ ಸಂರಕ್ಷಣೆಗಾಗಿ ರೂಪಿಸಿರುವ ಕಾಯ್ದೆ ಮತ್ತು ನಿಯಮಗಳು ಕುರಿತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ. ದಾಕ್ಷಾಯಿಣಿ ಉಪನ್ಯಾಸ ನೀಡಲಿದ್ದಾರೆ.

## ಕನ್ನಿಕಾ ಪರಮೇಶ್ವರಿ ದೇಗುಲದಲ್ಲಿ ನಾಳೆ ಅಗ್ನಿ ಹೋತ್ರ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪತಂಜಲಿ ಯೋಗ ಸಮಿತಿ, ವೇದ ಭಾರತೀ ವತಿಯಿಂದ ಅ. 5ರ ಭಾನುವಾರ ಲೋಕ ಕಲ್ಯಾಣಕ್ಕಾಗಿ ಸಾಮೂಹಿಕ ಅಗ್ನಿಹೋತ್ರ ಮತ್ತು ಕಾರ್ಯಾಗಾರ ಹಮಿಕೊಳ್ಳಲಾಗಿದೆ ಎಂದು ವೇದ ಭಾರತೀ ರಾಜ್ಯ ಸಂಯೋಜಕ ಹರಿಹರಪುರ ಶ್ರೀಧರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಅಂದು ಬೆಳಿಗ್ಗೆ 9 ಗಂಟೆಗೆ ಎಲ್ಲರಿಗಾಗಿ ಯೋಗ, ಎಲ್ಲರಿಗಾಗಿ ಯಜ್ಞ, ಎಲ್ಲರಿಗೂ ಆರೋಗ್ಯ ಎಂಬ ಧ್ಯೇಯದೊಂದಿಗೆ ಕಾರ್ಯಕ್ರಮ ರೂಪಿಸಲಾಗಿದೆಯೆಂದರು.

ಅಗ್ನಿಹೋತ್ರವು ಪುರಾತನ ಯಜ್ಞ ವಿಧಾನವಾಗಿದ್ದು, ವಾತಾವರಣ ಶುದ್ಧೀಕರಣ, ಮಾನಸಿಕ ಶಾಂತಿ, ದೈಹಿಕ ಆರೋಗ್ಯ ಹಾಗು ಸಾಮಾಜಿಕ ಏಕತೆಗಾಗಿ ಬಹುಮುಖ್ಯವಾಗಿದೆ. ಸಾಮೂಹಿಕ ಅಗ್ನಿಹೋತ್ರದ ಮೂಲಕ ಸಮಾಜದ ಶ್ರೇಯೋಭಿವೃದ್ಧಿಗೆ ಪೂರಕ ವಾತಾವರಣ ಸೃಷ್ಟಿಯಾಗುತ್ತದೆ ಎಂದರು.

ರಾಜ್ಯ ಪ್ರಭಾರಿ ವರಿಷ್ಠ ಭವರಲಾಲ್ ಆರ್ಯ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಹಾಸನ ಆರ್ಯ ವೈಶ್ಯ ಮಂಡಳಿ ಅಧ್ಯಕ್ಷ ಬಿ.ಹೆಚ್. ವಿಶ್ವನಾಥ ಶ್ರೇಷ್ಠಿ ಅಧ್ಯಕ್ಷತೆ ವಹಿಸಲಿದ್ದಾರೆ.

ಅಗ್ನಿಹೋತ್ರದಲ್ಲಿ ಭಾಗವಹಿಸುವವರಿಗೆ ವಸ್ತ್ರ ಸಂಹಿತೆ ಇದೆ. ಪುರುಷರು ಬಿಳಿ ಪಂಚೆ–ಶಲ್ಯ ಹಾಗೂ ಮಹಿಳೆಯರು ಹಳದಿ ಸೀರೆ, ಕೆಂಪು ರವಿಕೆ ಧರಿಸಬೇಕೆಂದು ಸೂಚಿಸಲಾಗಿದೆ. ಅಗತ್ಯವಿದ್ದರೆ ಭಾರತೀಯ ಸಾಂಪ್ರದಾಯಿಕ ಉಡುಗೆ ಧರಿಸಬಹುದು.

ಅಗ್ನಿಹೋತ್ರ ನಡೆಸಲು ಅಗತ್ಯವಿರುವ 650 ರೂ. ಮೌಲ್ಯದ ಸೆಟ್ ಅನ್ನು ವಿಶೇಷ ರಿಯಾಯಿತಿ ದರದಲ್ಲಿ 500 ರೂ.ಗೆ ಕಾರ್ಯಕ್ರಮದ ಸ್ಥಳದಲ್ಲೇ ಪಡೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಭಾಗವಹಿಸುವವರು ಬೆಳಿಗ್ಗೆ 8 ಗಂಟೆಯೊಳಗೆ ಸ್ಥಳಕ್ಕೆ ಆಗಮಿಸುವಂತೆ ಮನವಿ ಮಾಡಿದರು. ಮಾಹಿತಿಗೆ ಮೊ.ನಂ. 7892940096 ಇಲ್ಲಿಗೆ ಸಂಪರ್ಕಿಸಬಹುದು ಎಂದರು.

ಪತಂಜಲಿ ಯೋಗ ಪರಿವಾರ ಜಿಲ್ಲಾ ಸಂರಕ್ಷಕ ಲೋಕನಾಥ್, ಮಹಿಳಾ ಜಿಲ್ಲಾ ಪ್ರಭಾರಿ ಶಾರದ ಧರ್ಮಾನಂದ್, ಹೇಮಂತ್ ಕುಮಾರ್, ಯೋಗಪಟು ನಾಗರಾಜು ಇದ್ದರು.

## ಎಣ್ಣೆ ಏಟಲ್ಲಿ ತಾಯಿಯನ್ನೇ ಕೊಂದ ಪಾಪಿ ಪುತ್ರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಕುಡಿದ ಅಮಲಿನಲ್ಲಿ ಹೆತ್ತ ತಾಯಿಯನ್ನೇ ಪಾಪಿ ಪುತ್ರ ಕೊಲೆಗೈದಿರುವ ಘಟನೆ ಆಲೂರು ತಾಲ್ಲೂಕಿನ ಚನ್ನಾಪುರ ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದಿದೆ.

ಗ್ರಾಮದ ನಾಗಯ್ಯ ಅವರ ಕಿರಿಯ ಹೆಂಡತಿ ಪ್ರೇಮಮ (40) ಮೃತರು. ಪುತ್ರ ಸಂತೋಷ್ (19) ಹತ್ಯೆಗೈದ ಆರೋಪಿ. ರಾತ್ರಿ ನಡೆದ ಘಟನೆ ಅರಿವಿಗೆ ಇಲ್ಲದಂತೆ ಬೆಳಿಗ್ಗೆ ಆಸ್ಪತ್ರೆಗೆ ಬಂದಿದ್ದ ಆತನನ್ನು ಪೊಲೀಸರು ಬಂಧಿಸಿದ್ದಾರೆ.

ಘಟನೆ ವಿವರ: ಆಯುಧ ಪೂಜೆ ಹಿನ್ನೆಲೆಯಲ್ಲಿ ಗುರುವಾರ ರಾತ್ರಿ 10.30ರ ಸಮಯದಲ್ಲಿ ಮಾಂಸದೂಟಕ್ಕೆ ತಯಾರಿ ಮಾಡಿಕೊಳ್ಳುತ್ತಿದ್ದರು. ಪ್ರೇಮಮ ಜೋರಾಗಿ ಮಾತನಾಡುತ್ತಿದ್ದರು. ಮನೆಗೆ ನೆಂಟರು ಬಂದಾಗಲಾದರೂ ಸುಮನಿರು ಎಂದು ಮಗ ಎಷ್ಟೇ ಹೇಳಿದರೂ ಪ್ರೇಮಮ ಕೇಳಲಿಲ್ಲ ಎನ್ನಲಾಗಿದೆ.

ಆಕೆಯ ಮಾತು ಕೇಳಲಾಗದೆ ಆಕ್ರೋಶಗೊಂಡ ಆತ ಕಬ್ಬಿಣದ ಹಾರೆಯಿಂದ ಹೊಡೆಯಲು ಯತ್ನಿಸಿದ್ದ. ಸ್ಥಳದಲ್ಲಿದ್ದ ತಂದೆ ನಾಗಯ್ಯ ಹಾರೆ ಕಿತ್ತುಕೊಂಡು ಅದನ್ನು ಇಡಲು ಹೋಗುತ್ತಿದ್ದಂತೆ ಪಕ್ಕದಲ್ಲೇ ಇದ್ದ ಮರದ ದೊಣ್ಣೆಯಿಂದ ತಲೆಗೆ ಬಲವಾಗಿ ಹೊಡೆದಿದ್ದಾನೆ. ತೀವ್ರ ಅಸ್ವಸ್ಥರಾದ ಪ್ರೇಮಮ ಅವರನ್ನು ಹಿಮ್ಸ್‌ಗೆ ದಾಖಲಿಸಲಾಯಿತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಮದ್ಯದ ಅಮಲಿನಲ್ಲಿದ್ದ ಸಂತೋಷ್‌ಗೆ ರಾತ್ರಿ ಏನು ನಡೆದಿದೆ ಎಂಬುದರ ಪರಿವೇ ಇಲ್ಲದೆ ಬೆಳಿಗ್ಗೆ ಆಸ್ಪತ್ರೆಗೆ ಬಂದಾಗ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಲಿಂಗಾಯತರಿಗೆ ಸಿಗದ ಮಾನ್ಯತೆ: ಸಮುದಾಯ ಮುಖಂಡರ ಬೇಸರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿಶ್ವಗುರು ಬಸವಣ್ಣ ಅವರ ತತ್ವಗಳಿಂದ ಹುಟ್ಟಿಕೊಂಡು 900 ವರ್ಷಗಳ ಇತಿಹಾಸ ಹೊಂದಿರುವ ಲಿಂಗಾಯತ ಧರ್ಮಕ್ಕೆ ಇನ್ನೂ ಸ್ವತಂತ್ರ ಧರ್ಮದ ಮಾನ್ಯತೆ ದೊರಕಿಲ್ಲ. ಬೌದ್ಧ, ಜೈನ ಮತ್ತು ಸಿಖ್ ಧರ್ಮಗಳಿಗೆ ಭಾರತ ಸರ್ಕಾರ ಅಲ್ಪಸಂಖ್ಯಾತ ಧರ್ಮದ ಸ್ಥಾನಮಾನ ನೀಡಿ ವಿಶೇಷ ಸೌಲಭ್ಯ ಒದಗಿಸಿದರೂ, ಲಿಂಗಾಯತರಿಗೆ ಅದೇ ನ್ಯಾಯ ದೊರಕದಿರುವುದು ಬೇಸರದ ವಿಷಯ ಎಂದು ಜಿಲ್ಲಾ ವೀರಶೈವ ಲಿಂಗಾಯತ ಸಂಘದ ಉಪಾಧ್ಯಕ್ಷ ಭುವನಾಕ್ಷ ಹೇಳಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಲಿಂಗಾಯತ ಧರ್ಮವು ತನ್ನದೇ ಆದ ಆಚರಣೆ, ನಂಬಿಕೆ, ತತ್ವಶಾಸ್ತ್ರ ಹೊಂದಿರುವ ಪ್ರತ್ಯೇಕ ಧರ್ಮ. ಆದರೆ ಇನ್ನೂ ಹಿಂದು ಧರ್ಮದ ಅಂಗವೆಂದು ಪರಿಗಣಿಸಲಾಗುತ್ತಿದೆ. ಅದರಿಂದಾಗಿ ಲಿಂಗಾಯತರಿಗೆ ಅಲ್ಪ ಸಂಖ್ಯಾತರ ಸೌಲಭ್ಯಗಳು ಸಿಗದೆ ಅನ್ಯಾಯವಾಗಿದೆ. ನಮ ಹೋರಾಟ ಯಾವ ಧರ್ಮ, ಜಾತಿ ಅಥವಾ ಪಕ್ಷದ ವಿರುದ್ಧವಲ್ಲ. ಇದು ಸಮಾಜದ ಹಕ್ಕುಗಳನ್ನು ಪಡೆಯುವ ಹೋರಾಟ ಎಂದು ಸ್ಪಷ್ಟಪಡಿಸಲಾಗಿದೆ ಎಂದರು.

ಲಿಂಗಾಯತ ಶಿಕ್ಷಣ ಸಂಸ್ಥೆಗಳಲ್ಲಿ ಲಿಂಗಾಯತ ವಿದ್ಯಾರ್ಥಿಗಳಿಗೆ ಶೇ.50 ರಷ್ಟು ಮೀಸಲಾತಿ, ವಿದ್ಯಾರ್ಥಿ ವೇತನ ಹಾಗೂ ಶುಲ್ಕ ವಿನಾಯಿತಿ. ಬಡ ಕುಟುಂಬಗಳಿಗೆ ಅಲ್ಪಸಂಖ್ಯಾತರ ಕಲ್ಯಾಣ ನಿಧಿಯಿಂದ ಸಾಲ, ಸಬ್ಸಿಡಿ ಹಾಗೂ ಉದ್ಯೋಗ ತರಬೇತಿ. ಮಠ, ಮಂದಿರ, ಗದ್ದುಗೆಗಳ ಆಸ್ತಿಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಸರ್ಕಾರದ ನೆರವು ಅಗತ್ಯ ಎಂದರು.ಬಸವಣ್ಣ ಅವರ ಮಾನವೀಯ ತತ್ವಗಳನ್ನು ಪಠ್ಯಕ್ರಮಗಳ ಮೂಲಕ ಮುಂದಿನ ಪೀಳಿಗೆಗೆ ಕಲಿಸುವ ಅವಕಾಶ ಬೇಕು. ಲಿಂಗಾಯತರಿಗೆ ಸ್ವತಂತ್ರ ಧರ್ಮದ ಮಾನ್ಯತೆ ದೊರೆತರೆ ದೇಶದ ಐಕ್ಯತೆಗೆ ಯಾವುದೇ ಹಾನಿಯಾಗುವುದಿಲ್ಲ. ಬದಲಿಗೆ ಬಸವಣ್ಣ ಅವರ ತತ್ವಗಳು ಮಾನವ ಘನತೆ, ಸಮಾನತೆ, ಕಾಯಕದ ಮಹತ್ವ, ದಾಸೋಹ, ವಿಶ್ವ ಬಾಂಧವ್ಯ ಇವೆಲ್ಲ ಜಗತ್ತಿನ ಮಟ್ಟದಲ್ಲಿ ಪ್ರಸಾರವಾಗಿ ಭಾರತದ ಹೆಮೆ ಹೆಚ್ಚಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಲಿಂಗಾಯತರಿಗೆ ಪ್ರತ್ಯೇಕ ಧರ್ಮದ ಮಾನ್ಯತೆ ದೊರೆತರೆ ಧಾರ್ಮಿಕ ಕ್ಷೇತ್ರದಲ್ಲೂ ಮಹತ್ವದ ಬದಲಾವಣೆಗಳು ಸಾಧ್ಯವೆಂದು ಲಿಂಗಾಯತ ಮಹಾಸಭೆ ತಿಳಿಸಿದೆ. ಮಹಾಸಭೆಯ ಪ್ರಕಾರ ಪಂಚಾಚಾರ್ಯರು ಹಾಗೂ ವೈದಿಕ ಪುರೋಹಿತ ಶಾಹಿಯು ಬಸವ ಧರ್ಮವನ್ನು ನಾಶಪಡಿಸಲು ಹಲವಾರು ಪ್ರಯತ್ನ ಮಾಡಿದರೂ ಯಶಸ್ವಿಯಾಗಿಲ್ಲ ಎಂದರು.

ಜಂಟಿ ಕಾರ್ಯದರ್ಶಿ ಲತೇಶ್ ಕುಮಾರ್, ವೀರಶೈವ ಜಾಗತಿಕ ಲಿಂಗಾಯಿತ ಸಂಘದ ಅಧ್ಯಕ್ಷ ಹೊಂಬೇಶ್ ಇದ್ದರು.

# ಸಂಸ್ಕೃತಿ ಉಳಿವಿಗೆ ಗುರುಕಲ ಶಿಕ್ಷಣ ಸಹಕಾರಿ: ಶ್ರವಣಬೆಳಗೊಳ ಶ್ರೀ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ನಮ ಸಂಸ್ಕೃತಿ, ಪರಂಪರೆ, ಸಿದ್ಧಾಂತ, ಆಚಾರ-ವಿಚಾರ, ಕೃಷಿ, ಧಾರ್ಮಿಕ ಪೂಜಾ ವಿಧಿ-ವಿಧಾನ, ಸಾಧುಗಳ ಸೇವೆ ಮಾಡುವುದರೊಂದಿಗೆ ಎಲ್ಲಾ ರೀತಿಯ ಭಾರತೀಯ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಪಾರಂಪರಿಕ ಗುರುಕುಲವನ್ನು ಪ್ರಾರಂಭಿಸಲಾಗುತ್ತಿದೆ ಎಂದು ಶ್ರವಣಬೆಳಗೊಳ ಶ್ರೀ ದಿಗಂಬರ ಜೈನ ಮಠದ ಪೀಠಾಧ್ಯಕ್ಷ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಸ್ವಾಮೀಜಿ ಹೇಳಿದರು.



ತಾಲ್ಲೂಕಿನ ಶ್ರವಣಬೆಳಗೊಳ ಸಮೀಪದ ಶ್ರೀಧವಲ ತೀರ್ಥಂನಲ್ಲಿರುವ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ ಆವರಣದಲ್ಲಿ ನಿರ್ಮಾಣಗೊಳ್ಳುತ್ತಿರುವ ಗುರುಕುಲ ಕಟ್ಟಡ ಕಾಮಗಾರಿಗೆ ಗುರುವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿ, 4.5 ಕೋಟಿ ರೂ. ವೆಚ್ಚದಲ್ಲಿ 26000 ಚ. ಅಡಿಯ 15 ಕೊಠಡಿಗಳ ಪುರಾತನ ಶೈಲಿಯ ಸಂಪೂರ್ಣ ಕಲ್ಲಿನಿಂದ ನಿರ್ಮಾಣ ಮಾಡುತ್ತಿರುವ ಪಾರಂಪರಿಕ ಕಟ್ಟಡ ಇದಾಗಿದೆ ಎಂದರು. ಹಿಂದಿನಿಂದಲೂ ಶ್ರವಣ ಬೆಳಗೊಳ ಶ್ರೀಮಠದ ಪೀಠದಲ್ಲಿದ್ದ ಎಲ್ಲಾ ಸ್ವಾಮೀಜಿಯವರು ಜ್ಞಾನಕ್ಕೆ ಹೆಚ್ಚಿನ ಆದ್ಯತೆ ನೀಡುವುದರ ಜೊತೆಗೆ ಧಾರ್ಮಿಕ ಮತ್ತು ಲೌಕಿಕ ಶಿಕ್ಷಣ ಹಾಗೂ ಮಹಿಳಾ ಶಿಕ್ಷಣ-ಕ್ಕೂ ಪ್ರಾಶಸ್ತ್ಯ ನೀಡಿದ್ದರೆಂದು ತಿಳಿಸಿದರು.

ಶ್ರವಣಬೆಳಗೊಳದಲ್ಲಿ ಸಾವಿರಾರು ವರ್ಷಗಳಿಂದ ಗುರುಕುಲಗಳು ನಡೆದುಕೊಂಡು ಬರುತ್ತಿವೆ. 150 ವರ್ಷಗಳ ಹಿಂದೆ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಅವರೆಲ್ಲರೂ ಮದ್ರಾಸ್ ಪ್ರಾಂತ್ಯದವರಾಗಿದ್ದರು ಎನ್ನುವ ದಾಖಲೆಗಳಿವೆ. 1928ರಲ್ಲಿ ಇಲ್ಲಿನ ಗುರುಗಳಾಗಿದ್ದ ನೇಮಿಸಾಗರವರ್ಣಿ ಚಾರುಕೀರ್ತಿ ಸ್ವಾಮೀಜಿ ಜೈನ ಸಂಸ್ಕೃತ ವೇದ ಮಹಾ ಪಾಠಶಾಲೆ ಎಂಬ ಬೃಹತ್ ಗುರುಕುಲವನ್ನು ತೆರೆದಿದ್ದರು. ಅಲ್ಲದೇ ದೇಶದಾದ್ಯಂತ ಅನೇಕ ಗುರುಕುಲ ತೆರೆದು ವಿದ್ಯಾಭ್ಯಾಸಕ್ಕೆ, ಮಹಿಳೆಯರ ಶಿಕ್ಷಣಕ್ಕೆ ಮಹತ್ವ ನೀಡಿದ್ದರೆಂದರು. ನಮ ಹಿಂದಿನ ಗುರುಗಳಾಗಿದ್ದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀ-ಜಿಯವರು ಗೊಮಟೇಶ್ವರ ವಿದ್ಯಾಪೀಠ ಬ್ರಹಚರ್ಯ ಆಶ್ರಮ ಎಂಬ ಗುರುಕುಲ ತೆರೆದು, ತಾವು ಪೀಠಾಧ್ಯಕ್ಷರಾಗಿದ್ದ 54 ವರ್ಷಗಳ ಅವಧಿಯಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ಒದಗಿಸಿದ್ದರು. ಈ ಗುರುಕುಲದಲ್ಲಿ ಓದಿದ ವಿದ್ಯಾರ್ಥಿಗಳಲ್ಲಿ ಅನೇಕರು ಸಾಧು ಸಂತರಾಗಿದ್ದು, ಪ್ರಸ್ತುತ ಕರ್ನಾಟಕದಲ್ಲಿರುವ ಹಲವಾರು ಜೈನ ಮಠಗಳಿಗೆ ಪೀಠಾಧಿಪತಿಗಳಾಗಿದ್ದಾರೆಂದು ತಿಳಿಸಿದರು. ಇಂತಹ ಇತಿಹಾಸ ಹೊಂದಿರುವ ಈ ಗುರುಕುಲದಲ್ಲಿ ಪ್ರಸ್ತುತ ಒಟ್ಟು 205 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, 2024 ರಿಂದ ಶ್ರೀ ಕಾಳಲಾದೇವಿ ಕನ್ಯಾಶ್ರಮ ಗುರುಕುಲವನ್ನು ಪುನರಾರಂಭಿಸಿ 35 ವಿದ್ಯಾರ್ಥಿನಿಯರಿಗೆ ಸಂಪೂರ್ಣವಾಗಿ ಉಚಿತ ಶಿಕ್ಷಣ ನೀಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಬಟ್ಟೆ, ಸಮವಸ್ತ್ರ, ಪುಸ್ತಕ, ಊಟ-ಉಪಹಾರ ಸೇರಿ ಅವರ ಶಿಕ್ಷಣಕ್ಕೆ ಬೇಕಾದ ವ್ಯವಸ್ಥೆಯನ್ನು ಉಚಿತವಾಗಿ ವ್ಯವಸ್ಥೆ ಮಾಡುವ ಮೂಲಕ ಧಾರ್ಮಿಕ ಹಾಗು ಲೌಕಿಕ ಶಿಕ್ಷಣವನ್ನು ನೀಡಲಾಗುತ್ತಿದೆ. ಜೊತೆಗೆ ಸಿಬಿಎಸ್ಸಿ ಮಾದರಿಯ ಶಿಕ್ಷಣವನ್ನು ಉಚಿತವಾಗಿ ನೀಡಬೇಕೆಂಬ ಉದ್ದೇಶದಿಂದ ಮುಂದಿನ 2030ರ ಮಹಾಮಸ್ತಕಾಭಿಷೇಕ ಮಹೋತ್ಸವದ ಒಳಗೆ 1008 ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನೀಡುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಹೊಂದಲಾಗಿದೆ ಎಂದು ಮಾಹಿತಿ ನೀಡಿದರು.ದಾನಿಗಳಾದ ರಾಜಸ್ಥಾನದ ಕವೀಶ್ ಜೈನ್, ಕೃತಿ ಜೈನ್ ಹಾಗು ಕಿಯಾಂಶ್ ಜೈನ್ ಅವರಿಗೆ ಕ್ಷೇತ್ರದ ವತಿಯಿಂದ ಸನಾನಿಸಿ ಗೌರವಿಸಲಾಯಿತು. ಶ್ರೀ ದಿಗಂಬರ ಜೈನ ಸಮಾಜದ ಅಧ್ಯಕ್ಷ ಜೆ.ಪಿ.ಪದಕುಮಾರ್, ಶ್ರೀ ಮಠದ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಹೆಚ್.ಪಿ. ಅಶೋಕ್‌ಕುಮಾರ್, ಸದಸ್ಯರಾದ ಭರತೇಶ್, ಯಶಸ್, ಪೌದನ್ ಮುಂತಾದವರಿದ್ದರು. ಜಿನೇಶ್ ಶಾಸ್ತ್ರಿ ಹಾಗೂ ವಿಮಲ್ ಪಂಡಿತ್ ಪೂಜಾ ವಿಧಿ ವಿಧಾನ ನೆರವೇರಿಸಿದರು.

# ಜಿಲ್ಲಾದ್ಯಂತ ಅರ್ಥಪೂರ್ಣ ವಿಜಯದಶಮಿ ಆಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಸಾಲಗಾಮೆ ರಸ್ತೆಯ ಬನ್ನಿ ಮಂಟಪದಲ್ಲಿ ಗುರುವಾರ ಬನ್ನಿ ಕಡಿಯುವ ಮೂಲಕ ಐತಿಹಾಸಿಕ ವಿಜಯದಶಮಿ ಆಚರಿಸಲಾಯಿತು.

ಹಾಸನಾಂಬ ದೇವಸ್ಥಾನದಿಂದ ಮೆರವಣಿಗೆಯಲ್ಲಿ ಸಾಗಿ ಬಂದ ನಗರ ದೇವತೆಗಳಾದ ನೀರುಬಾಗಿಲು ಆಂಜನೇಯ, ಸಿದ್ದೇಶ್ವರ, ಚನ್ನಕೇಶವ, ಮೈಲಾರಲಿಂಗ ಹಾಗೂ ಚಾಮುಂಡೇಶ್ವರಿ ದೇವಿಯನ್ನು ಬನ್ನಿ ಮಂಟಪ (ಮಾರನವಮಿ ಮಂಟಪ)ಕ್ಕೆ ತಂದು ಪೂಜಾ ವಿಧಿ, ವಿಧಾನದ ನೆರವೇ-ರಿಸಲಾಯಿತು. ತಳವಾರ ವಂಶಸ್ಥರಾದ ನರಸಿಂಹರಾಜು ಅವರು ಸಂಪ್ರದಾಯದಂತೆ ಹತ್ತು ದಿನಗಳ ಕಾಲ ಉಪವಾಸವಿದ್ದು, ಪೂಜಾ ವಿಧಿಯಂತೆ ಬನ್ನಿತುಂಬಿ ನೆಟ್ಟಿದ್ದ ಬಾಳೆಕಂದಿಗೆ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿ ನಂತರ ಕತ್ತರಿಸಿದರು.

ಐದು ದೇವರಿಗೆ ನಮಸ್ಕರಿಸಿ ನಂತರ ಬಾಳೆ ಕಂದು ಪ್ರದಕ್ಷಿಣೆ ಹಾಕಿ ಬನ್ನಿ ಕತ್ತರಿಸುತ್ತಿದ್ದಂತೆ ಜನರು ಬನ್ನಿ ಎಲೆ ಬಾಚಿಕೊಳ್ಳಲು ಮುಗಿಬಿದ್ದರು. ಕತ್ತರಿಸಿದ ಬನ್ನಿಯನ್ನು ನೆರೆದಿದ್ದ ಎಲ್ಲಾ ಜನರಿಗೆ ಬನ್ನಿಯೊಂದಿಗೆ ಬಾಳೆಕಂದನ್ನು ಸಿಗಿದು ಪ್ರಸಾದ ಎಂದು ಹಂಚಲಾಯಿತು. ಈ ಬನ್ನಿಯನ್ನು ತಮ ಮನೆಯಲ್ಲಿ ಬಾಗಿಲಿನಲ್ಲಿ ಅಥವಾ ಮನೆಯಲ್ಲಿ ಇಟ್ಟಿಕೊಂಡರೆ ಯಾವ ದುಷ್ಟಶಕ್ತಿಯಿಂದಲು ಕೆಡುಕಾಗುವುದಿಲ್ಲ ಎಂಬುದು ಜನರ ನಂಬಿಕೆ ಹಾಗೂ ಹಿಂದಿನಿಂದಲು ನಡೆದುಕೊಂಡು ಬಂದಿರುವ ಸಂಪ್ರಾದಾಯವಾಗಿದ್ದು ನಾಡ ಹಬ್ಬವನ್ನು ನಗರದ ಜನರು ಭಕ್ತಿ, ಸಂಭ್ರಮದಿಂದ ಆಚರಿಸಿದರು.


ಹಬ್ಬದ ಪ್ರಯುಕ್ತ ಮಂಟಪ ಆವರಣವನ್ನು ಶುಚಿಗೊಳಿಸಿ ದೇಗುಲಕ್ಕೆ ಬಣ್ಣ ಬಳಿಯಲಾಗಿತ್ತು. ಬನ್ನಿ ಎಲೆಗಾಗಿ ಜನರು ಒಬ್ಬರ ಮೇಲೊಬ್ಬರು ಮುಗಿಬೀಳುತ್ತಿದ್ದ ಹಿನ್ನಲೆಯಲ್ಲಿ ಸಂಭವನೀಯ ಅವಘಡ ತಪ್ಪಿಸಲು ಈ ಬಾರಿ ಬ್ಯಾರಿಕೇಡ್ ಅಳವಡಿಸಲಾಗಿತ್ತು. ತಳವಾರ ವಂಶಸ್ಥರು ಹಾಗು ತಾಲ್ಲೂಕು ಆಡಳಿತ ಅಧಿಕಾರಿಗಳಷ್ಟೇ ಸ್ಥಳದಲ್ಲಿ ಇದ್ದರಿಂದ ಜನದಟ್ಟಣೆ ತಪ್ಪಿತು. ಎಲ್ಲರಿಗೂ ಬನ್ನಿ ಎಲೆ ತಲುಪಿಸಲಾಯಿತು. ನೂರಾರು ಮಹಿಳೆಯರು, ವೃದ್ಧರು ಭಕ್ತಿಯಿಂದ ದೇವರಿಗೆ ನಮಸ್ಕರಿಸಿದರು. ಧಾರ್ಮಿಕ ಕೈಂಕರ್ಯ ಮುಗಿಯುತ್ತಿದ್ದಂತೆ ಮೆರವಣಿಗೆ ಮೂಲಕ ದೇವರ ಮೂರ್ತಿಗಳು ತೆರಳಿದವು. ತಹಶೀಲ್ದಾರ್ ಗೀತಾ ಹಾಗೂ ಪೊಲೀಸರು ಹಾಜರಿದ್ದರು.

# ಹೆದ್ದಾರಿಯಲ್ಲಿ ವಾಹನ ಓಡಾಟಕ್ಕೆ ಮಾಂಸದಂಗಡಿ ಅಡಚಣೆ

## ಎಚ್ಚೆತ್ತುಕೊಳ್ಳದ ಜನಪ್ರತಿನಿಧಿಗಳು । ಅನಧಿಕೃತ ಮಾರಾಟಗಾರರ ಹಾವಳಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಹಾಸನ-ಬೇಲೂರು ಮಾರ್ಗದ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಅಕ್ರಮ ಹಂದಿ ಮಾಂಸದಗಂಡಿ ಹೆಚ್ಚುತ್ತಿದ್ದು ವಾಹನ ಸವಾರರು ಪರದಾಡುವಂತಾಗಿದೆ.



ಹಾಸನದಿಂದ ಹಗರೆ ವರೆಗೆ ಹೆಜ್ಜೆಗೊಂದು ಅಂಗಡಿ ತಲೆ ಎತ್ತಿರುವುದು ಮಾತ್ರವಲ್ಲದೆ ರಸ್ತೆಗೆ ತಾಗಿದಂತಿವೆ. ಹಗರೆ ಗ್ರಾ.ಪಂ. ವ್ಯಾಪ್ತಿ ಯಲ್ಲಿ ಜಿಲ್ಲೆಯ ಪ್ರಸಿದ್ಧ ದೇವಾಲಯಗಳಲ್ಲಿ ಒಂದಾದ ಶ್ರೀ ದೇವಿರಮ ದೇವಸ್ಥಾನ ಹಗರೆ ಗ್ರಾಮದಲ್ಲಿದೆ. ಈ ದೇವಾಲಯಕ್ಕೆ ನಿತ್ಯ ನೂರಾರು ಭಕ್ತಾದಿಗಳು ಆಗಮಿಸುತ್ತಾರೆ. ದೇವಾಲಯಕ್ಕೆ ಬರುವ ಭಕ್ತಾದಿಗಳು ತಮ ಇಷ್ಟಾರ್ಥ ಈಡೇರಿಕೆಗಾಗಿ ಹಂದಿ ಹಾಗೂ ಕೋಳಿಯನ್ನು ಹರಕೆಯಾಗಿ ನೀಡುತ್ತಾರೆ. ಈ ಹಿನ್ನಲೆಯಲ್ಲಿ ಇಲ್ಲಿಯ ಕೆಲವರು ಹಾಸನ ಬೇಲೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ಬದಿಗೆ ಹೊಂದಿಕೊಂಡಂತೆ ಶಾಶ್ವತವಾಗಿ ಹಂದಿ ಮಾಂಸದ ಶೆಡ್‌ಗಳನ್ನು ನಿರ್ಮಿಸಿಕೊಂಡು ವ್ಯಾಪಾರ ವಹಿವಾಟು ನಡೆಸುತ್ತಿದ್ದಾರೆ. ಈ ರಸ್ತೆ ಮೊದಲೇ ಅಪಘಾತ ವಲಯವಾಗಿದ್ದು ರಸ್ತೆಯಲ್ಲಿ ಅನಧಿಕೃತ ಶೆಡ್‌ನಿಂದ ಅಪಾಘಾತಗಳು ಸೇರಿ ಸಂಚಾರಕ್ಕೆ ಸಾಕಷ್ಟು ಸಮಸ್ಯೆಯಾಗುತ್ತಿದೆಯೆಂದು ಸ್ಥಳೀಯ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬೇಲೂರು-ಹಾಸನ ರಾಷ್ಟ್ರಿಯ ಹೆದ್ದಾರಿ 373 ರಸ್ತೆಯ ಹಗರೆ ಗ್ರಾಮದಲ್ಲಿ ಹತ್ತಕ್ಕೂ ಹೆಚ್ಚು ಹಂದಿ ಮಾಂಸದ ಅಂಗಡಿಗಳಿವೆ. ಆದರಲ್ಲಿ ಕೆಲವು ಹಂದಿ ಮಾಂಸದ ಅಂಗಡಿ ತಮ ಜಾಗದಲ್ಲಿ ನಿರ್ಮಿಸಿಕೊಂಡು ಅಧಿಕೃತವಾಗಿ ವ್ಯಾಪಾರ ವಹಿವಾಟು ನಡೆಸಿದರೆ ಇನ್ನೂ ಕೆಲವರು ರಸ್ತೆ ಬದಿಯ ಸರ್ಕಾರಿ ಜಾಗದಲ್ಲಿ ಶೆಡ್ ನಿರ್ಮಿಸಿಕೊಂಡು ಅನಧಿಕೃತವಾಗಿ ವ್ಯಾಪಾರ ನಡೆಸುತ್ತಿದ್ದಾರೆ. ಈ ಮಾರ್ಗದಲ್ಲಿ ದಿನನಿತ್ಯ ಸಾವಿರಾರು ವಾಹನ ಸಂಚಾರವಷ್ಟೇ ಅಲ್ಲದೆ ಜನಗಳ ಓಡಾಟವು ಸಹ ಹೆಚ್ಚಾಗುತ್ತಿದ್ದು ಸಮಸ್ಯೆಯ ಬಗ್ಗೆ ಅಧಿಕಾ-ರಿಗಳಿಗೆ ದೂರು ನೀಡಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ರಸ್ತೆಯ ಎರಡೂ ಬದಿಯಲ್ಲೂ ಅನಧಿಕೃತ ಅಂಗಡಿಗಳು ನಿರ್ಮಾಣಗೊಂಡು ವಾಹನಗಳ ಸಂಚಾರಕ್ಕೂ ಅಡಚಣೆ ಹಾಗು ಅಪಘಾತಗಳು ಉಂಟಾಗುವ ಸಂಭವವಿದೆ.

ಹಗರೆ ಗ್ರಾಮದಲ್ಲಿ ಈ ಹಂದಿ ಮಾಂಸದ ಶೆಡ್‌ಗಳು ಇರುವಲ್ಲಿ ರಸ್ತೆ ತಿರುವು ಸಹ ಇರುವ ಕಾರಣ ಅಪಘಾತಗಳು ಸಂಭವಿಸುತ್ತಿವೆ. ಹೀಗಾಗಿ ರಸ್ತೆ ಬದಿಗೆ ಹೊಂದಿಕೊಂಡಿರುವ ಅಂಗಡಿಗಳನ್ನು ತೆರವುಗೊಳಿಸುವಂತೆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು ಎಂದು ಸ್ಥಳೀಯರ ಆಗ್ರಹವಾಗಿದೆ.

ಈ ಕು-ರಿತು ಸುದ್ದಿಗಾರರೊಂದಿಗೆ ಮಾತನಾಡಿದ ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ್, ಬೇಲೂರು ತಾಲ್ಲೂಕಿನಲ್ಲಿರುವ ಅಧಿಕಾರಿಗಳಿಗೆ ಹಾಗು ಗ್ರಾಮ ಪಂಚಾಯಿತಿ ಅಧಿಕಾ-ರಿಗಳಿಗೆ ಕಾಳಜಿ ಇಲ್ಲ. ಹೆದ್ದಾರಿ ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದೆ ಇರುವುದು ಬೇಸರ ತರಿಸಿದೆ ಎಂದರು.ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಓಡಾಡುವಂತ ಪರಿಸ್ಥಿತಿ ಇದೆ. ಶೆಡ್ ನಿರ್ಮಿಸಿ ಬಾಡಿಗೆಗೆ ಕೊಟ್ಟಿದ್ದಾರೆ. ಇದ್ಯಾವುದೂ ಅಧಿಕಾರಿಗಳಿಗೆ ಕಾಣುತ್ತಿಲ್ಲ. ಬೀದಿ ಬದಿ ವ್ಯಾಪಾರಿಗಳಿಗೆ ಕೆಲವು ನಿಬಂಧನೆಗಳಿವೆ. ಅವುಗಳ ಪ್ರಕಾರ ವ್ಯಾಪಾರ ವಹಿವಾಟು ಮಾಡಲಿ, ಕಾನೂನು ಬಾಹಿರವಾಗಿರುವ ಹಂದಿ ಮಾಂಸದ ಅಂಗಡಿಗಳನ್ನು ತೆರವುಗೊಳಿಸದಿದ್ದಾರೆ ರಸ್ತೆ ಮಧ್ಯೆ ಕುಳಿತು ಹೋರಾಟದ ಮಾಡಬೇಕಾಗುತ್ತದೆಂದು ಎಚ್ಚ-ರಿಕೆ ನೀಡಿದರು.



ಹಾಸನ: ನಗರದ ರಾಜೀವ್ ತಾಂತ್ರಿಕ ಮಹಾವಿದ್ಯಾಲಯದ ಅಂತಿಮ ವರ್ಷದ 21 ವಿದ್ಯಾರ್ಥಿಗಳು Ui Path ಎಂಬ ಕಂಪನಿ ನಡೆಸುವ ಯುಐಪಾತ್ ಸರ್ಟಿಫೈಡ್ ಪ್ರೋಫೆಷನಲ್ - ಆಟೋಮೇಷನ್ ಡೆವಲಪರ್ ಅಸೋಸಿಯೇಟ್ ಸರ್ಟಿಫಿಕೇಶನ್ ಎಂಬ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಜಾಗತಿಕ ಮಟ್ಟದ ವೃತ್ತಿಪರ ಪ್ರಮಾಣ ಪತ್ರ ಪಡೆದರು. ಇದೇ ಮೊದಲ ಬಾರಿಗೆ 21 ವಿದ್ಯಾರ್ಥಿಗಳು ಏಕ ಕಾಲದಲ್ಲಿ ಉತ್ತೀರ್ಣರಾಗಿರುವುದು ಕರ್ನಾಟಕದಲ್ಲಿಯೇ ಮೊದಲು. ಈ ಪ್ರಮಾಣಪತ್ರ ಪಡೆಯುವುದರಿಂದ ಭಾರತದಲ್ಲಿ ಅಲ್ಲದೆ ವಿಶ್ವದಾದ್ಯಂತ ಉತ್ತಮ ಶ್ರೇಣಿಯ ಉದ್ಯೋಗಾವಕಾಶ ದೊರೆಯುತ್ತವೆ.

# ಅಲ್ಲಿ ಬದುಕುಳಿದು ಇಲ್ಲಿ ಹತರಾದರು

ಇವರ ಹೆಸರು ಸೆವಾಂಗ್ ಥಾರ್ಚಿನ್. ಲಡಾಖ್ ಲೇಹ್ ನಗರದಿಂದ ಹತ್ತು ಕಿಮೀ ದೂರದಲ್ಲಿ ಇವರ ಊರಿದೆ. ಕಾರ್ಗಿಲ್ ಯುದ್ಧದಲ್ಲಿ ಹೋರಾಡಿದ ಯೋಧ ಇವರು.

ಪಾಕಿಸ್ತಾನ ಮತ್ತು ಚೀನಾ ಗಡಿಯಲ್ಲಿ ಲಡಾಖ್ ಜನರೇ ಭಾರತದ ಮೊದಲ ಲೈನ್ ಆಫ್ ಡಿಫೆನ್ಸ್ ಎಂದರೆ ತಪ್ಪಲ್ಲ. ಲಡಾಖ್ ಜನರು ತಮ ದೇಶ ಪ್ರೇಮವನ್ನು ಸಾಬೀತು ಮಾಡುವ ಅಗತ್ಯವಿಲ್ಲ. ಇಲ್ಲಿನ ಸಾಕಷ್ಟು ಯುವಕರ ಮೊದಲ ಆದ್ಯತೆ ಭಾರತೀಯ ಸೇನೆ. ತಮ ಓದು ಮುಗಿಸಿ ಸೇನೆ ಸೇರುವ ಕನಸು ಕಾಣುತ್ತಿದ್ದ ಇಲ್ಲಿನ ಯುವಕರಿಗೆ ಅಗ್ನಿವೀರ್ ಯೋಜನೆ ಭಾರಿ ನಿರಾಶೆಯನ್ನೇ ಹುಟ್ಟಿಸಿತ್ತು.



ಜಮು ಕಾಶೀರ್ ರಾಜ್ಯದ ಭಾಗವಾಗಿದ್ದ ವಿಶಾಲ ಲಡಾಖ್ ಮೊದಲಿನಿಂದಲೂ ರಾಜ್ಯ ಸರ್ಕಾರದಿಂದ ತಾರತಮವನ್ನು ಎದುರಿಸುತ್ತಲೆ ಬಂದಿತ್ತು. ಅನುದಾನವೆಲ್ಲಾ ಕಾಶೀರ, ಶ್ರೀನಗರಗಳೇ ಪಡೆದುಬಿಡುತ್ತಿದ್ದವು. 2019 ರಲ್ಲಿ ಲಡಾಖ್ ಪ್ರತ್ಯೇಕ ಯೂನಿಯನ್ ಟೆರಿಟೋರಿ ಎಂದು ಘೋಷಣೆಯಾದಾಗ ಲಡಾಖ್ ಜನರು ಸಂಭ್ರಮಿಸಿದ್ದರು. ಮುಂದೆ ಅನುದಾನ ಸಿಗಲಿದೆ, ಸ್ವಯಾಡಳಿತ ಬರಲಿದೆ, ಆರನೇ ಷೆಡ್ಯೂಲ್ ಅಡಿಯಲ್ಲಿ ತಮ ವಿಶೇಷ ಬುಡಕಟ್ಟು ಸಂಸ್ಕೃತಿ, ಸೂಕ್ಷ್ಮ ಪರಿಸರ, ಹೇರಳ ನೈಸರ್ಗಿಕ ಸಂಪತ್ತು ಸುರಕ್ಷಿತವಾಗಿ ಉಳಿಯಲಿದೆ ಎಂದು ನಂಬಿದ್ದರು. ಈಗ ಆ ಆಶ್ವಾಸನೆ ಹುಸಿಯಾಗಿದೆ.

ದೆಹಲಿಯಲ್ಲಿ ಕುಳಿತು ಹೊಸ ಹೊಸ ಯೋಜನೆಗಳನ್ನು ರೂಪಿಸಲಾಗುತ್ತಿದೆ. (ಉದಾಹರಣೆಗೆ: ದೆಹಲಿಯ ವಿದ್ಯುತ್ ಕಬಳಿಕೆಗೆ ಅನುಕೂಲವಾಗುವಂತೆ ಲಡಾಖ್ ಪ್ರಾಂತ್ಯದ 48000 ಎಕರೆಯಲ್ಲಿ ಸೋಲಾರ್ ಪ್ಲಾಂಟ್ ಶುರು ಮಾಡುವ ಉದ್ದೇಶವಿದೆ. ಇಲ್ಲಿನ ಕುರಿ ಮೇಯಿಸುವ, ಶ್ರೇಷ್ಠ ಪಶೀನ ಉಣ್ಣೆಯನ್ನೇ ನಂಬಿ ಬದುಕು ಸಾಗಿಸುವ ಜನರಿಗೆ ಮಾರಕ) ಲಡಾಖ್ ಭೂಮಿ, ಜಲ, ವಿಶಿಷ್ಟ ಜೀವನ ಶೈಲಿಯ ಗಂಧ ಗಾಳಿ ತಿಳಿಯದ ಅಧಿಕಾರಿಗಳು ಕೇಂದ್ರ ಸರ್ಕಾರದ ಆದ-ೇಶಗಳನ್ನು ಅನುಷ್ಠಾನಗೊಳಿಸುತ್ತಿದ್ದರೆ ಬಾಣಲೆಯಿಂದ' ಬೆಂಕಿಗೆ ಹಾ-ರಿದಂತಾಗಿದೆ ಜನರ ಪಾಡು. ನಿರುದ್ಯೋಗ ತಾಂಡವಾಡುತ್ತಿದೆ.

ಕೇಂದ್ರದ ಆಸಡ್ಡೆ, ಪರಿಸರ ನಾಶ, ನಿರುದ್ಯೋಗ ಕುರಿತು ಹೋರಾಟ ಕಳೆದೈದು ವರುಷಗಳಿಂದ ನಡೆಯುತ್ತಲೇ ಇದೆ. ಕೇಂದ್ರ 2019 ರಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಶಾಂತಿಯುತ ಪ್ರತಿಭಟನೆ ಸಾಗಿದೆ.

ಭಾರತಕ್ಕಾಗಿ ಕಾರ್ಗಿಲ್ ರಣಭೂಮಿಯಲ್ಲಿ ಜೀವದ ಹಂಗು ತೊರೆದು ಹೋರಾಡಿದ್ದ ಯೋಧ ಸೆವಾಂಗ್ ಸೇನೆಯಿಂದ ಸ್ವಯಂ ನಿವೃತ್ತಿ ಪಡೆದು ಬಟ್ಟೆ ಅಂಗಡಿ ಇಟ್ಟುಕೊಂಡಿದ್ದ. ಈ ಮಾಜಿ ಯೋಧನನ್ನು ಕಳೆದವಾರ ಕೊಲ್ಲಲಾಯಿತು. ನೀಡಿದ ಭರವಸೆಗಳನ್ನು ಈಡೇರಿಸಿ. ಲಡಾಖ್ ಎಂಬ ಸ್ವರ್ಗವನ್ನು ಉಳಿಸಿಕೊಳ್ಳಿ ಎಂದು ಪ್ರತಿಭಟನೆ ಮಾಡುತ್ತಿದ್ದ ಸೆವಾಂಗ್ ಅವರನ್ನು ನಡು ಬೀದಿಯಲ್ಲಿ ಥಳಿಸಿ, ತಲೆಗೆ ಮತ್ತು ಎದೆಗೆ ಗಂಡಿಟ್ಟು ಕೊಂದರು. ನಮ ದೇಶದೊಳಕ್ಕೆ ನುಸಳುವ ದುಸ್ಸಾಹಸ ಮಾಡಿದ್ದ ದುರುಳರ ವಿರುದ್ಧ ಸೆಣೆಸಿ ಕಾರ್ಗಿಲ್ ನಲ್ಲಿ ಬದುಕುಳಿದ ಯೋಧ, ತನ್ನ ದೇಶದಲ್ಲೇ ತನ್ನವರಿಂದಲೇ ಹತನಾದ. (ಸೆವಾಂಗ್ ಮಕ್ಕಳು ಕೂಡ ಭಾರತೀಯ ಸೇನೆ ಸೇರಬೇಕು ಎಂದು ಕನಸು ಕಾಣುತ್ತಿದ್ದರಂತೆ)

-ಹರೀಶ್ ಗಂಗಾಧರ್

ಸಕಲೇಶಪುರ: ತಾಲ್ಲೂಕಿನ ಬಾಳ್ಳುಪೇಟೆ ಹೋಬಳಿಯ ಹಸುಗವಳ್ಳಿ ಗ್ರಾಮದಲ್ಲಿ ಪ್ರತಿಷ್ಠಾಪಿಸಿರುವ ಬನಶಂಕರಿ ದೇವಾಲಯದಲ್ಲಿ ನವರಾತ್ರಿ ಪ್ರಯುಕ್ತ ಭವ್ಯ ದಸರಾ ಮಹೋತ್ಸವವನ್ನು ಧಾರ್ಮಿಕ ವೈಭವದಿಂದ ಆಚರಿಸಲಾಯಿತು.



ನವರಾತ್ರಿಯ ಒಂಬತ್ತು ದಿನಗಳ ಕಾಲ ದೇವಿಗೆ ಅಲಂಕರಿಸಿ ಭಕ್ತರಿಗೆ ದರ್ಶನ ಕಲ್ಪಿಸಲಾಯಿತು. ದಿನನಿತ್ಯ ನೂರಾರು ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಪೂಜೆ, ಹೋಮ, ಹವನ ಹಾಗೂ ಅರ್ಚನೆಗಳಲ್ಲಿ ಭಾಗವಹಿಸಿ ಧಾರ್ಮಿಕ ಚಟುವಟಿಕೆಗಳಿಗೆ ಸಾಕ್ಷಿಯಾದರು.

ಅಂತಿಮ ದಿನ ಭಕ್ತರ ಉಪಸ್ಥಿತಿಯಲ್ಲಿ ಹೋಮ ಹವನ ಹಾಗೂ ವಿಶೇಷ ಪೂಜೆ ನೆರವೇರಿಸಿ ಉತ್ಸವವನ್ನು ಸಾಂಪ್ರದಾಯಿಕವಾಗಿ ಸಂಪನ್ನಗೊಳಿಸಲಾಯಿತು. ಹಸುಗವಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರ ಉಪಸ್ಥಿತಿಯಲ್ಲಿ ಧಾರ್ಮಿಕ ಕೈಂಕರ್ಯ ಸಂಪನ್ನಗೊಂಡವು.

## ಅ.6 ರಂದು ಸಾಮಾನ್ಯ ಸಭೆ

ಹಾಸನ: ಮಹಾನಗರ ಪಾಲಿಕೆ ಮಹಾಪೌರ ಗಿರೀಶ್ ಚನ್ನವೀರಪ್ಪ ಅವರ ಅಧ್ಯಕ್ಷತೆಯಲ್ಲಿ ಅ. 6 ರಂದು ಮಧ್ಯಾಹ್ನ 12.30 ಗಂಟೆಗೆ ಮಹಾನಗರ ಪಾಲಿಕೆ ರಾಷ್ಟ್ರಕವಿ ಕುವೆಂಪು ಸಭಾಂಗಣದಲ್ಲಿ ಸಾಮಾನ್ಯ ಸಭೆ ನಡೆಯಲಿದೆ.

# ಇತಿಹಾಸದಲ್ಲಿ ಈ ದಿನ

## ಅಕ್ಟೋಬರ್ 4

**1957:** ಸೋವಿಯತ್ ಸಂಘಟನೆಯ ಸ್ಪುತ್ನಿಕ್ 1 ಲಾಂಚ್ ಆಗಿದ್ದು, ಇದು ಮಾನವನ ಮೊದಲ ಕೃತಕ ಉಪಗ್ರಹವಾಗಿದ್ದು, ಬಾಹ್ಯಾಕಾಶ ಯುಗವನ್ನು ಆರಂಭಿಸಿತು.

**1582:** ಜೂಲಿಯನ್ ಕ್ಯಾಲೆಂಡರ್‌ನ ಕೊನೆಯ ದಿನವಾಗಿದ್ದು, ಪಾದ್ರಿ ಗ್ರೆಗೊರಿ ಪ್ರಕಟಿಸಿದ ಪರಿಷ್ಕೃತ ಕ್ಯಾಲೆಂಡರ್ ಪ್ರಯೋಗಕ್ಕೆ ಉದ್ಘಾಟನೆ.

**1883:** ಮೊದಲ ಓರಿಯಂಟ್ ಎಕ್ಸ್‌ಪ್ರೆಸ್ ರೈಲು ಸೇವೆ ಪ್ಯಾರಿಸ್‌ನಿಂದ ಸ್ಟಾಂಬುಲ್ (ಇಸ್ತಾಂಬುಲ್) ಕಡೆಗೆ ಆರಂಭವಾಯಿತು.

**1777:** ಅಮೆರಿಕದ ಕ್ರಾಂತಿಕಾರಿ ಯುದ್ಧದ ಸಮಯದಲ್ಲಿ ಜನರಲ್ ಜಾರ್ಜ್ ವಾಷಿಂಗ್ಟನ್ ನೇತೃತ್ವದಲ್ಲಿ ಜೆರ್ಮಂಟ್‌ಟೌನ್ ಮೇಲೆ ದಾಳಿ ನಡೆಯಿತು.

**1966:** ಲೆಸೋಥೊ ರಾಷ್ಟ್ರ ಬ್ರಿಟಿಷ್ ಆಳ್ವಿಕೆಗಿಂದ ಸ್ವಾಧೀನತೆ ಪಡೆದಿತು.

**1992:** ಮೊಜಾಂಬಿಕ ದೀರ್ಘಕಾಲ ನಾಗರಿಕ ಯುದ್ಧ ಸಮಾಪ್ತಿಗೊಂಡಿತು.

# ಮಹಾತ್ಮ ಗಾಂಧೀಜಿ ಅಹಿಂಸಾ ಮಾರ್ಗ ಪ್ರೇರಣೆಯಾಗಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಹಿಂಸಾ ಮಾರ್ಗದ ಮೂಲಕ ರಾಷ್ಟ್ರಕ್ಕೆ ಸ್ವಾತಂತ್ರ್ಯ ಕಲ್ಪಿಸಿಕೊಟ್ಟ ಮಹಾತ ಗಾಂಧೀಜಿ ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರು ಪಾಲಿಸಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.




ಜಿಲ್ಲಾಡಳಿತ ವತಿಯಿಂದ ನಗರದ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಮಹಾತ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ದಿ. ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಉದ್ಘಾಟಿಸಿ ಮಾತನಾಡಿ, ಗಾಂಧೀಜಿ ಅವರು ನಮಗೆ ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ. ಅವರ ಬಗೆಗೆ ಎಷ್ಟು ಬಣ್ಣಿಸಿದರು ಸಾಲದು. ಅವರ ನಡೆ-ನುಡಿ, ತತ್ವ-ಆದರ್ಶಗಳನ್ನು ಪಾಲಿಸುವುದರ ಜೊತೆಗೆ ಮುಂದಿನ ಪೀಳಿಗೆಗೆ ತಿಳಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ದೇಶಕಂಡ ಅಪ್ರತಿಮ ನಾಯಕರಾದ ಲಾಲ್ ಬಹದ್ದೂರ್ ಶಾಸ್ತ್ರೀ ಅವರು ಸರಳ ಸಜ್ಜನಿಕೆ ಹಾಗೂ ಭ್ರಷ್ಟಚಾರ ಮುಕ್ತ ಆಡಳಿತವನ್ನು ನೀಡಿದಂತಹವರು. ಬಡತನದಲ್ಲಿ ಹುಟ್ಟಿ, ಬಡತನದಲ್ಲಿ ಬೆಳೆದು, ಬಡತನದಲ್ಲೇ ಹಸುನೀಗಿದವರಾಗಿದ್ದಾರೆ. ತಾವು ಪ್ರಧಾನ ಮಂತ್ರಿಯಾದ ಕಡಿಮೆ ಅವಧಿಯಲ್ಲೇ ಅತ್ಯಂತ ಪ್ರಾಮಾಣಿಕವಾದ ಆಡಳಿತವನ್ನು ನೀಡಿದವರಾಗಿದ್ದಾರೆಂದು ತಿಳಿಸಿದರು.

ಲಾಲ್ ಬಹದ್ದೂರ್ ಶಾಸ್ತ್ರೀ ಅವರು ಕೊಟ್ಟಿರುವ ಜೈ ಜವಾನ್ ಜೈಕಿಸಾನ್ ಸಂದೇಶ, ರೈತರ ಸಬಲೀಕರಣ, ಮಹಿಳಾ ಸಬಲೀಕರಣ, ವಿವಿಧ ಖಾತೆಗಳ ಸಚಿವರಾಗಿ ಕೆಲಸ ನಿರ್ವಹಣೆ ಮಾಡಿರುವುದು ಮಾದ-ರಿಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಎಲ್ಲಾ ಧರ್ಮದ ಮೂಲ ಒಂದೇ ಆಗಿದೆ. ಅಹಿಂಸೆ, ಸತ್ಯ ಎತ್ತಿ ಹಿಡಿಯುವಂತಹದ್ದಾಗಿದೆ ಎಂದು ತಿಳಿಸಿದರು.ಗಾಂಧೀಜಿಯವರು ಸ್ವಚ್ಛತೆಗೆ ಪ್ರಾಮುಖ್ಯತೆ ನೀಡಿದ್ದಾರೆ. ಸ್ವಚ್ಛತೆಯೇ ಸತ್ಯ, ಸ್ವಚ್ಛತೆಯೇ ಸುಂದರ, ಹಾಸನವನ್ನು ಸ್ವಚ್ಛ ಜಿಲ್ಲೆಯಾಗಿಸಲು ನಾವೆಲ್ಲರೂ ಕೈ ಜೋಡಿಸಬೇಕು. ಕಸವನ್ನು-ಎಲ್ಲೆಂದರಲ್ಲಿ ಎಸೆಯಬಾರದು. ಈ ನಿಟ್ಟಿನಲ್ಲಿ ಎಲ್ಲರೂ ಪರಿಸರ ಸ್ವಚ್ಛವಾಗಿಟ್ಟುಕೊಳ್ಳಲು ಪ್ರತಿಜ್ಞೆ ಮಾಡೋಣವೆಂದರು.

ಪ್ರತಿಯೊಂದು ಅಂಗಡಿ ಮುಂದೆ ಕಸದ ಬುಟ್ಟಿಗಳನ್ನು ಇಟ್ಟುಕೊಳ್ಳಬೇಕು. ಸ್ವ-ಇಚ್ಛೆಯಿಂದ ಸ್ವಚ್ಛತೆಗೆ ಪ್ರಾಮುಖ್ಯತೆ ನೀಡುವಂತಹದ್ದು ನಾಗರೀಕರೆಲ್ಲರ ಜವಾಬ್ದಾ-ರಿಯಾಗಿದೆ ಎಂದು ತಿಳಿಸಿದರು.

ಸರ್ವಧರ್ಮ ಪ್ರಾರ್ಥನೆ ನೆರವೇರಿತು. ಹಿಂದು ಧರ್ಮದ ಕುರಿತು ಸತ್ಯನಾರಾಯಣ, ಮುಸ್ಲಿಂ ಧರ್ಮದ ಪರವಾಗಿ ಎಸ್.ಎಸ್. ಪಾಷ, ಕ್ರಿಶ್ಚಿಯನ್ ಧರ್ಮ ಗುರು ವೀನಿಶ್ ಸ್ವರೂಪ್, ಬೌದ್ಧ ಧರ್ಮ ಕುರಿತು ಬಸವರಾಜ್, ಜೈನ್ ಧರ್ಮ ಕುರಿತು ಪದಶ್ರೀ ಮೃತ್ಯುಂಜಯ ಅವರು ಪ್ರವಚನ ನೀಡಿದರು.

ಕೇಂದ್ರೀಯ ಶಾಲಾ ಮಕ್ಕಳು ಗಾಂಧೀಜಿ ಅವರ ಜನಪ್ರಿಯ ಭಜನೆಗಳನ್ನು ಹಾಡುವ ಮೂಲಕ ಭಜನ ಕಾರ್ಯಕ್ರಮ ನಡೆಸಿಕೊಟ್ಟರು. ಸೆಂಟ್ರಲ್ ಕಾಮರ್ಸ್ ಕಾಲೇಜಿನ ವಿದ್ಯಾರ್ಥಿಗಳು ಮಹಾತಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಕುರಿತು ಕಿರು ನಾಟಕ ಪ್ರದರ್ಶಿಸಿದರು.

ಜಿಲ್ಲಾ ಪೊಲೀಸ್ ವ-ರಿಷ್ಠಾಧಿಕಾರಿ ಮೊಹಮದ್ ಸುಜೀತಾ, ಅಪರ ಜಿಲ್ಲಾಧಿಕಾರಿ ಮಂಜುನಾಥ್, ಉಪ ವಿಭಾಗಾಧಿಕಾರಿ ಮಾರುತಿ ಉಪಸ್ಥಿತರಿದ್ದರು. ಯದೀಶ್ ನಿರೂಪಣೆ ಮಾಡಿದರು. ಜಿಲ್ಲಾ ವಾರ್ತಾಧಿಕಾರಿ ಮೀನಾಕ್ಷಮ ಸ್ವಾಗತಿಸಿದರು.

ಬಹುಮಾನ ವಿತರಣೆ: ಗಾಂಧಿ ಜಯಂತಿ ಹಿನ್ನಲೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಏರ್ಪಡಿಸಿದ್ದ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಪ್ರೌಢ ಶಾಲೆ, ಪದವಿ ಪೂರ್ವ, ಪದವಿ/ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

## ಪ್ರಬಂಧ ಸ್ಪರ್ಧೆ: ನಗದು ಪುರಸ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಮಹಾತ ಗಾಂಧೀಜಿ ಅವರ 156ನೇ ಜಯಂತಿ ಅಂಗವಾಗಿ ಏರ್ಪಡಿಸಿದ್ದ ಮಹಾತ ಗಾಂಧೀಜಿ ಬದುಕು, ಸ್ವಾತಂತ್ರ್ಯ ಚಳವಳಿ, ಸರಳತೆ, ಅಹಿಂಸಾ ಮಾರ್ಗಅಸ್ಪೃಶ್ಯತೆ ನಿವಾರಣೆಗಾಗಿ ನಡೆಸಿದ ಪ್ರಯೋಗಗಳು ಇತ್ಯಾದಿ ವಿಚಾರಗಳ ಬಗ್ಗೆ ಪ್ರೌಢಶಾಲೆ, ಪದವಿ ಪೂರ್ವ ಹಾಗು ಪದವಿ/ಸ್ನಾತಕೊತ್ತರ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿಜೇತರಿಗೆ ಪ್ರಥ-ಮ ಬಹುಮಾನ 3000 ರೂ., ದ್ವಿತೀಯ 2000 ಹಾಗು ತೃತೀಯ ಬಹುಮಾನ 1000 ರೂ. ನೀಡಲಾಯಿತು.

ಪ್ರೌಢ ಶಾಲಾ ವಿಭಾಗದಲ್ಲಿಚನ್ನರಾಯಪಟ್ಟಣ ತಾಲ್ಲೂಕು ಉದಯಪುರ ಕೆಪಿಎಸ್ ಶಾಲೆಯ ನಿತ್ಯ ಪ್ರಥಮ,ಆಲೂರು ತಾಲ್ಲೂಕು ಕಣತೂರಿನ ಕಿರಣ್ ಆಂಗ್ಲ ಮಾಧ್ಯಮ ಶಾಲೆಯ (ಪ್ರೌಢ ಶಾಲಾ ವಿಭಾಗದ) ಗ್ರೀಷಾದ್ವಿತಿಯ ಬಹುಮಾನ, ಬೇಲೂರು ತಾಲ್ಲೂಕಿನ ಸರ್ವೋದಯ ಪ್ರೌಢ ಶಾಲೆಯ ವಿ. ಆದಿತ್ಯಗೌಡ ತೃತೀಯ ಬಹುಮಾನ ತಮದಾಗಿಸಿಕೊಂಡರು.

ಪದವಿ ಮತ್ತು ಸ್ನಾತಕೋತ್ತರ ವಿಭಾಗದಲ್ಲಿ ಹೊಳೆನರಸೀಪುರ ತಾಲ್ಲೂಕು ಪಡುವಲಹಿಪ್ಪೆಯ ಹೆಚ್.ಡಿ. ದೇವೇಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎಸ್.ಆರ್. ಸುಶೀತ ಪ್ರಥಮ ಬಹುಮಾನ, ಚನ್ನರಾಯಪಟ್ಟಣದ ತಾಲ್ಲೂಕಿನ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಭವ್ಯಶ್ರೀ ದ್ವಿತೀಯ, ಹಾಸನದ ಕುವೆಂಪು ಪ್ರಥಮ ದರ್ಜೆ ಕಾಲೇಜಿನ ಕೆ.ಆರ್. ಸೌಮ್ಯ ತೃತೀಯ ಬಹುಮಾ ತಮ್ಮದಾಗಿಸಿಕೊಂಡರು.

ಗಮನ ಸೆಳೆದ ಗಾಂಧಿ ವೇಷಧಾರಿಗಳು: ಪುಟಾಣಿ ಮಕ್ಕಳು ಮಹಾತ ಗಾಂಧಿ ಹಾಗು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ವೇಷಧಾರಿಗಳಾಗಿ ಗಮನ ಸೆಳೆದರು. ವೇಷಧಾರಿ ಮಕ್ಕಳಿಗೆಲ್ಲರಿಗೂ ಬಹುಮಾನ ನೀಡಲಾಯಿತು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248